ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಜೆ.ಸಿ. ಮಾಧುಸ್ವಾಮಿ, ಶಿವಾನಂದ ಎಸ್. ಪಾಟೀಲ್, ಜಿ.ವಿ. ಶ್ರೀರಾಮರೆಡ್ಡಿ ಮತ್ತು ವಾಟಾಳ್ ನಾಗರಾಜ್ ಇವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವವರು ಶ್ರೀ ಜಿ.ಟಿ. ದೇವೇಗೌಡ (ಸಹಕಾರ ಸಚಿವರು)

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ಶ್ರೀ ಸಿದ್ಧೇಶ್ವರ ಬ್ಯಾಂಕ್ ನಿ. ಬಿಜಾಪುರ ಇದರಲ್ಲಿನ ನ್ಯೂನತೆಗಳ ಬಗ್ಗೆ ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 30(1) ರನ್ವಯ ಜರುಗಿಸುವ ಬಗ್ಗೆ ಮಾನ್ಯ ಸಹಕಾರಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ.ಟಿ. ದೇವೇಗೌಡ (ಸಹಕಾರ ಸಚಿವರು) :- ಮಾನ್ಯ ಉಪಾಧ್ಯಕ್ಷರೆ,

* ಶ್ರೀ ಸಿದ್ಧೇಶ್ವರ ಸಹಕಾರ ಬ್ಯಾಂಕ್ ನಿ. ಬಿಜಾಪೂರ ಇದರ ವ್ಯವಹಾರಗಳ ಕುರಿತು 17 ಆರೋಪಗಳ ಮೇಲೆ ಆಡಳಿತ ಮಂಡಳಿಯನ್ನು ದಿನಾಂಕ 23-01-2007 ರಂದು ರದ್ದುಗೊಳಿಸಿ 6 ತಿಂಗಳ ಕಾಲ ಜಿಲ್ಲಾಧಿಕಾರಿಗಳು, ಬಿಜಾಪುರ ಇವರನ್ನು ಆಡಳಿತಗಾರರನ್ನಾಗಿ ನೇಮಿಸಲಾಗಿದೆ. ಆದೇಶ ಸಂಖ್ಯೆ ಯುಬಿಸಿ-1/117 ಎಸ್ಎಸ್ಎನ್/2006-07 ದಿನಾಂಕ23-01-2007 ಲಗತ್ತಿಸಿದೆ.

* ಬ್ಯಾಂಕಿನ ವಿರುದ್ಧ ಹೊರಿಸಲಾದ ಆರೋಪಗಳನ್ನು ಸರಿಪಡಿಸಿ ವರದಿ ನೀಡಲು ಆಡಳಿತಗಾರರಿಗೆ ಸೂಚಿಸಲಾಗಿದೆ.

* ಅಲ್ಲದೇ ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಆದೇಶ ಸಂಖ್ಯೆ ಯುಬಿಸಿ-1/117/ಎಸ್ಎಸ್ಎನ್ 2006-07 ದಿನಾಂಕ 15-02-2007 ರಲ್ಲಿ ಬ್ಯಾಂಕಿನ ವ್ಯವಹಾರಗಳ ಕುರಿತು ಪ್ರಕರಣ 61 ರ ವಿಚಾರಣೆಯನ್ನು ಆದೇಶಿಸಿದ್ದು, ಇದರಲ್ಲಿ 2000-01 ರಿಂದ 2006-07 ರ ಅವಧಿಯಲ್ಲಿ ಬ್ಯಾಂಕಿನಿಂದ ವಿವಿಧ ರೀತಿಯ ಸಾಲಗಳನ್ನು ನೀಡುವಾಗ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ/ನಿರ್ದೇಶನಗಳನ್ನು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ಹಾಗೂ ನಿಯಮ ಹಾಗೂ ಬ್ಯಾಂಕಿನ ಸಾಲಗಳ ಒಳನಿಯಮಗಳನ್ನು ಉಲ್ಲಂಘಿಸಿ ಹಾಗೂ ಭದ್ರತೆ ಪಡೆಯದೆ ನೀಡಿರುವ ಸಾಲದ ಪ್ರಕರಣಗಳಿದ್ದಲ್ಲಿ ಇಂತಹ ಪ್ರಕರಣಗಳಿಂದ ಬ್ಯಾಂಕಿಗೆ ಉಂಟಾದ ನಷ್ಟ ಹಾಗೂ ಅದಕ್ಕೆ ಹೊಣೆಗಾರರು ಯಾರು ಎಂಬುದನ್ನು ಗುರುತಿಸುವ ಅಂಶವು ಸಹ ಒಳಗೊಂಡಿರುತ್ತದೆ. ಬೆಳಗಾಂ ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕರು ಪ್ರಕರಣ 64ರ ವಿಚಾರಣಾಧಿಕಾರಿ ಆಗಿರುತ್ತಾರೆ.

* ಶ್ರೀ ಜ್ಞಾನಯೋಗಿ ಶಿವಕುಮಾರ ಸಕ್ಕರೆ ಕಾರ್ಖಾನೆ ನಿ. ಹಿರೇಬೇವನೂರು ಇದಕ್ಕೆ ದಿನಾಂಕ 31-03-2006 ರಂದು ರೂ. 325.00 ಲಕ್ಷ ಸಾಲ ನೀಡಿದ ವಿವಗಳು ಈ ಕೆಳಕಂಡಂತಿರುತ್ತವೆ.

1) ಸಾಲ ನೀಡಿದ ದಿನಾಂಕ	:	31-03-2003
2) ಸಾಲದ ಮೊತ್ತ	:	ರೂ. 325.00 ಲಕ್ಷ
3) ವಸೂಲಾದ ಸಾಲದ ಮೊತ್ತ	:	ಅಸಲು ರೂ. 108.47 ಲಕ್ಷ
	:	ಬಡ್ಡಿ ರೂ. 151.98 ಲಕ್ಷ
4) ಈಗ ಬಾಕಿ ಇರುವ ಸಾಲದ ಮೊತ್ತ	:	ರೂ. 239.63 ಲಕ್ಷ
5) ಮುದ್ದತ್ತು ಮೀರಿದ ಸಾಲದ ವಿವರ	:	ಅಸಲು ರೂ. 60.37 ಲಕ್ಷ
	:	ಬಡ್ಡಿ ರೂ. 38.34 ಲಕ್ಷ
ಒಟ್ಟು	:	**ರೂ. 98.71 ಲಕ್ಷ**

ಈಗ ಸದರಿ ಸಾಲದ ವಸೂಲಿ ಸಲುವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 70 ರ ಅಡಿ ದಾವಾ ನೋಟೋಸ್ ಜಾರಿ ಮಾಡಲಾಗಿದೆ.

* ಈ ಬ್ಯಾಂಕಿನ ಆಡಳಿತ ಮಂಡಳಿಯನ್ನು 1 ಆರೋಪಗಳ ಮೇರೆ ರದ್ದುಗೊಳಿಸಿದ್ದು, ಇದರಲ್ಲಿ 2001-02 ರಲ್ಲಿ ಶ್ರೀ ಜ್ಞಾನಯೋಗಿ ಶಿವಕುಮಾರ್ ಸ್ವಾಮೀಜಿ ಸಕ್ಕರೆ ಕಾರ್ಖಾನೆ ನಿ. ಹಿರೇಬೇವನೂರು ಇದರ ಷೇರು ಖರೀದಿಸಲು 169 ಜನ ಸದಸ್ಯರಿಗೆ ಒಟ್ಟು ರೂ. 8.36 ಕೋಟಿ ಸಾಳ ನೀಡಲಾಗಿದ್ದು, ಈ ರೀತಿ ನೀಡಲಾದ ಸಾಲದ ಅರ್ಜಿಗಳಲ್ಲಿ ಉದ್ದೇಶಗಳನ್ನು ತಿದ್ದಿ ವ್ಯಾಪಾರ ಹಾಗೂ ಹಳೆಯ ಸಾಲಗಳ ಮರುಪಾವತಿ" ಎಂದು ನಮೂದಿಸಿರುವ ವಿಷಯವು ಒಂದಾಗಿದ್ದು, ಈಗ ಒಟ್ಟು 162 ಪ್ರಕರಣಗಳನ್ನೊಳಗೊಂಡ ರೂ. 7,74,28,000/- ಮೊತ್ತವನ್ನು ವಸೂಲು ಮಾಡಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 70 ಅಡಿಯಲ್ಲಿ ದಾವಾ ಪ್ರಕರಣ ದಾಖಲು ಮಾಡಿದೆ. ಇನ್ನುಳಿದ ಪ್ರಕರಣಗಳಲ್ಲಿ ಸಾಲ ವಸೂಲಾತಿಯಾಗಿರುತ್ತದೆ.

ಆಡಳಿತಗಾರರು ಪ್ರಭಾರ ವಹಿಸಿಕೊಂಡ ನಂತರ ಬ್ಯಾಂಕಿನ ಪ್ರಗತಿ ಕೆಳಗಿನಂತೆ ಇರುತ್ತದೆ.

ಕ್ರ. ಸಂ	ವಿವರ	ದಿ 25–1–07 ಕ್ಕೆ ಇದ್ದಂತೆ	ದಿ 16–3–07 ಕ್ಕೆ ಇದ್ದಂತೆ
1.	ಷೇರು ಬಂಡವಾಳ	699.49	703.29
2.	ಠೇವುಗಳು	19255.85	17744.27
3.	ಸಾಲ & ಮುಂಗಡ	1320.23	12706.40
4.	ಮುದ್ದತ್ತು ಮೀರಿದ ಸಾಲದ ಮೊತ್ತ ಮತ್ತು ಪ್ರತಿಶತ	4376.76 33.75	4271.15 33.61
5.	ನಿವ್ವಳ ಅನುತ್ಪಾದಕ ಆಸ್ತಿ ಮೊತ್ತ ಹಾಗೂ ಪ್ರಮಾಣ	5672.22 50.33	4464.10 41.40

3547 ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) :– ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ಇಂಜಿನಿಯರಿಂಗ್ ವಿಭಾಗದಲ್ಲಿ 2004–05 ರಲ್ಲಿ ನಗರದ 100 ವಾರ್ಡ್‌ಗಳಲ್ಲಿ ಕೈಗೊಂಡಿರುವ, ಕೈಗೊಳ್ಳಲು ಅನುಮೋದಿಸಿರುವ ಕಾಮಗಾರಿಗಳು ಯಾವುವು; (ವಿವರಗಳನ್ನು ವಾರ್ಡ್‌ವಾರು ನೀಡುವುದು);

ಆ) ಈ ಕಾಮಗಾರಿಗಳು ಹಾಲಿ ಇರುವ ಹಂತವೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)

ಅ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕಾಮಗಾರಿ ಇಲಾಖೆಯಲ್ಲಿ 100 ವಾರ್ಡ್‌ಗಳಲ್ಲಿ 2004–05 ನೇ ಸಾಲಿನಲ್ಲಿ ತೆಗೆದುಕೊಂಡ ವಿವಿಧ ಶೀರ್ಷಿಕೆ ಮತ್ತು ಅನುದಾನದಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳ ಪೂರ್ವ, ಪಶ್ಚಿಮ, ದಕ್ಷಿಣ ವಲಯವಾರು ವಿವರಗಳನ್ನು ಲಗತ್ತಿಸಿದೆ. (ಅನುಬಂಧ–1) (ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು)

ಆ) ಈ ಕಾಮಗಾರಿಗಳ ಹಾಲಿ ಇರುವ ಹಂತವನ್ನು ಪಟ್ಟಿಯಲ್ಲಿ ತಿಳಿಸಲಾಗಿದೆ.